

ಇಬ್ಬರಲ್ಲೂ ಸಮಸ್ಯೆ ಇದ್ದುದರಿಂದ ಎಂಬ್ರಿಯೊ ಪಡೆದು ಮಗು ಮಾಡಿಕೊಳ್ಳುವುದೊಂದೇ ಇವರಿಗೆ ದಾರಿಯಾಯಿತು. ಇಬ್ಬರ ಬಾಳಿನ ಆಶಾಕಿರಣವಾಗಿ ಮುದ್ದಾದ ಮಗು ಜನ್ಮತಾಳಿತು.

ಹೆಚ್ಚುತ್ತಿರುವ ಜೀವನಶೈಲಿ ಕಾಯಿಲೆ, ಬದಲಾದ ಆಹಾರ ಪದ್ಧತಿ, ಉತ್ತೇಜನಕಾರಿಯಲ್ಲದ ವಾತಾವರಣ, ಆರ್ಥಿಕ ಗಳಿಕೆಗಾಗಿ ಒತ್ತಡದಲ್ಲೇ ಕೆಲಸ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿಯಿಂದಾಗಿ ಇಂದು ದಂಪತಿಗಳಲ್ಲಿ ಸಂತಾನ ಪ್ರಾಪ್ತಿ ಸಮಸ್ಯೆ ಹೆಚ್ಚಾಗಿ ಕಾಡುತ್ತಿದೆ. ಹೀಗಾಗಿ ಸಹಜವಾಗಿ ಮಹಿಳೆ ಗರ್ಭ ಧರಿಸಲು ಅಸಮರ್ಥಳಾಗುತ್ತಾಳೆ. ಆದರೆ ಮಗು ಪಡೆಯಬೇಕೆಂಬ ಬಯಕೆ ಆಕೆಯನ್ನು ಕಾಡುತ್ತಲೇ ಇರುತ್ತದೆ. ಇಂಥವರಿಗಾಗಿಯೇ ಇರುವ ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ 'ಎಂಬ್ರಿಯೊ ಡೊನೇಷನ್' ಒಂದು.

ಹಾಗೆಂದು ಎಂಬ್ರಿಯೊ ಡೊನೇಷನ್ ಮೂಲಕ ಮಕ್ಕಳನ್ನು ಪಡೆಯುವ ವ್ಯವಸ್ಥೆ ತೀರಾ ಹೊಸತೇನಲ್ಲ. ಇದೀಗ ಈ ತಂತ್ರಜ್ಞಾನ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ. ಮಗು ಪಡೆಯ ಬಯಸುವ ದಂಪತಿ ಈ ತಂತ್ರಜ್ಞಾನದ ಮೊರೆ ಹೋಗುತ್ತಿದ್ದಾರೆ. ವೈದ್ಯರೂ ದಂಪತಿಗಳೊಂದಿಗೆ ಗೌಪ್ಯತೆ ಕಾಪಾಡಿಕೊಳ್ಳುವ ಕಾರಣ ಎಂಬ್ರಿಯೊ ಡೊನೇಷನ್ ಬಗ್ಗೆ ತಿಳಿಯುವುದು ವೈದ್ಯರಿಗೆ ಮತ್ತು ಮಕ್ಕಳಾಸಕ್ತ ದಂಪತಿಗೆ ಮಾತ್ರ. ಮಹಿಳೆ ಸಹಜವಾಗಿ ಗರ್ಭ ಧರಿಸಿದಂತೆ ಕಾಣುವ ಕಾರಣ ಸಮಾಜದಲ್ಲೂ ಆಕೆ ಬೇರೆಯವರಿಂದ ಬಂಜೆ ಎನ್ನುವ ದೂಷಣೆಯಿಂದ ಮುಕ್ತಳಾದಂತೆಯೇ.

ಎಂಬ್ರಿಯೊ ದೇಣಿಗೆ ಎಂಬುದು ಎಆರ್‌ಟಿ (ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ) ತಂತ್ರಜ್ಞಾನವಾಗಿದ್ದು, ಹಲವಾರು ದಂಪತಿ ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಮಗು ಪಡೆಯಲು ಇದೊಂದು ಪರ್ಯಾಯ ಕ್ರಮ. ಈ ಚಿಕಿತ್ಸಾ ಕ್ರಮದಲ್ಲಿ ಅಭಿವೃದ್ಧಿ ಹೊಂದಿದ, ದಾನಿಗಳ ಎಂಬ್ರಿಯೊ ಅನ್ನು ಸ್ವೀಕರಿಸುವವರ ಗರ್ಭಕೋಶದಲ್ಲಿ ಇರಿಸಲಾಗುತ್ತದೆ. ಈ ಮೂಲಕ ದಂಪತಿ ಗರ್ಭಾವಸ್ಥೆ ಅನುಭವದ ಜತೆಗೆ ಮಗುವಿಗೆ ಜನ್ಮ ನೀಡಲು ನೆರವಾಗುತ್ತದೆ. ಮಗುವಿಲ್ಲದೆ ಕೊರಗುವ ಬದಲು ಎಂಬ್ರಿಯೊ ಸ್ವೀಕರಿಸುವ ತಾಯಿಯು ಸ್ವತಃ ನೈಸರ್ಗಿಕವಾಗಿ ಗರ್ಭ ಧರಿಸಿದ ಮಹಿಳೆಯಂತೆಯೇ ಪ್ರಸವ ವೇದನೆ ಅನುಭವಿಸಿ ಮಗುವಿಗೆ ಜನ್ಮ ನೀಡುತ್ತಾಳೆ.

'ಬಂಜೆತನ ಎಂಬುದು ಬೆಂಗಳೂರಿನಲ್ಲಿ ಪ್ರಮುಖ ಜೀವನಶೈಲಿ ಸಮಸ್ಯೆ. ಅನೇಕ ಸಂದರ್ಭಗಳಲ್ಲಿ ಪುರುಷ ಮತ್ತು ಮಹಿಳೆ ಎರಡೂ ಕಡೆ ಸಮಸ್ಯೆ ಕಾಣಿಸಿಕೊಳ್ಳಲಿದೆ. ಇಲ್ಲಿ ಐವಿಎಫ್, ಐಸಿಎಸ್‌ಐ ವೈಫಲ್ಯ ಕೂಡಾ ಇರಬಹುದು. ಇಂಥ ಪ್ರಕರಣಗಳಲ್ಲಿ ದಂಪತಿಗೆ ದಾನಿಯಿಂದ ಪಡೆದ ಫಲ ಯುಕ್ತ ಅಂಡಾಣು, ಮತ್ತು ವೀರ್ಯಾಣುಗಳು ವರದಾನವಾಗಲಿದೆ' ಎನ್ನುತ್ತಾರೆ ನೋವಾ ಐವಿಐ ಕೇಂದ್ರದ ತಜ್ಞ ವೈದ್ಯೆ ಡಾ. ಅವಿವಾ ಪಿಂಟೊ ರಾಡ್ರಿಗಸ್.

'ಎಂಬ್ರಿಯೊ ದೇಣಿಗೆ ಎಂಬುದು ಅನಾಮಿಕ ಪ್ರಕ್ರಿಯೆ, ಇಡೀ ಪ್ರಕ್ರಿಯೆಯನ್ನು ಗೌಪ್ಯವಾಗಿ ಇಡಲಾಗುತ್ತದೆ. ಇದು ದಂಪತಿಗೆ ಖಾಸಗಿತನ ಮತ್ತು ಗೌಪ್ಯತನವನ್ನು ನೀಡಲಿದೆ. ಇದರಿಂದಾಗಿ ದಂಪತಿ ಚಿಂತನೆಗೆ ಒಳಗಾಗುವ ಅಗತ್ಯವಿಲ್ಲ. ಜತೆಗೆ ತಮ್ಮ ಶಿಶುವನ್ನು ಸ್ವೀಕರಿಸಲು ಹಿಂಜರಿಕೆಯೂ ಅನಗತ್ಯ. ದೇಣಿಗೆ ಪಡೆದ ಎಂಬ್ರಿಯೊ ಆರೋಗ್ಯವಂತ, ಈಗಾಗಲೇ ಮಗುವಿರುವ ವ್ಯಕ್ತಿಗಳಿಂದ ಪಡೆಯಲಿದ್ದು, ಸಾಮಾನ್ಯವಾಗಿ ಗುಣಮಟ್ಟ ಇತರೆ ಐವಿಎಫ್ ಋತುಗಳಿಗೆ ಹೋಲಿಸಿದರೆ ಹೆಚ್ಚಿನ ಆರೋಗ್ಯವಾಗಿ ಇರುವಂತೆ ನೋಡಿಕೊಳ್ಳಲಾಗುತ್ತದೆ' ಎಂಬುದು ವೈದ್ಯರ ವಿವರಣೆ.

ಎಂಬ್ರಿಯೊ ಡೋನೇಷನ್ ಈಗ ವ್ಯಾಪಕವಾಗಿ ಅಂಗೀಕಾರ ಆಗುತ್ತಿದೆ. ಮಹಿಳೆಯು ಇಲ್ಲಿ ಯಾವುದೇ ಹಿಂಜರಿತ ಇಲ್ಲದೆ ಗರ್ಭ ಧರಿಸುವ ಅವಕಾಶ ಪಡೆಯಬಹುದು. ಜತೆಗೆ ಶಿಶುವಿನ ಜತೆಗೆ ಅವಿನಾಭಾವ ಸಂಬಂಧ ಹೊಂದಲಿದ್ದಾರೆ. ಈ ಕ್ರಮದಿಂದ ಬಂಜೆತನದಿಂದ ಬಳಲುವ ರೋಗಿಗಳಿಗೆ ವರದಾನ. ಈ ಪ್ರಕ್ರಿಯೆಗೆ ಅಂದಾಜು ಒಂದೂವರೆ ಲಕ್ಷ ಖರ್ಚು ತಗಲುತ್ತದೆ. ಗರ್ಭಧಾರಣೆ ಬಳಿಕ ಮಹಿಳೆ ಬೇರೆ ಹೆರಿಗೆ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳಬೇಕಾಗುತ್ತದೆ. ಜತೆಗೆ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯನ್ನೂ ವಹಿಸಬೇಕಾಗುತ್ತದೆ.

'ನಮ್ಮ ಕೇಂದ್ರದಲ್ಲಿ ಮೊದಲಿನಿಂದಲೂ ಈ ವ್ಯವಸ್ಥೆ ಇದ್ದರೂ ಇತ್ತೀಚೆಗೆ ಮಗು ಪಡೆಯಲು ಬಯಸಿ ಬರುವ ಫಲವತ್ತತೆ ಕೊರತೆ ಇರುವ ದಂಪತಿಗಳ ಸಂಖ್ಯೆ ಹೆಚ್ಚಾಗಿದೆ. ಅವರಿಗೆ ಸರಿಯಾದ ಚಿಕಿತ್ಸೆ ನೀಡಿ, ಎಲ್ಲ ರೀತಿಯ ಪರೀಕ್ಷೆಗಳನ್ನೂ ಮಾಡಿದ ಬಳಿಕವೇ 'ಎಂಬ್ರಿಯೊ ಡೊನೇಷನ್' ಚಿಕಿತ್ಸೆ ನೀಡುವುದು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮಗು ಬಯಸಿ ಬರುವವರ ಸಂಖ್ಯೆ ಹೆಚ್ಚು. ತಿಂಗಳಿಗೆ ಸುಮಾರು 100 ದಂಪತಿಗಳು ಬರುತ್ತಾರೆ. ಇದೇ ರೀತಿ 'ಎಂಬ್ರಿಯೊ ಡೊನೇಷನ್' ಚಿಕಿತ್ಸೆ ಇರುವ ಬೆಂಗಳೂರಿನ ಸುಮಾರು ಏಳೆಂಟು ಐವಿಎಫ್ ಕೇಂದ್ರಗಳಲ್ಲೂ ದಂಪತಿಗಳು ಈ ಸೌಲಭ್ಯ ಪಡೆಯಲು ಮುಂದೆ ಬರುತ್ತಿದ್ದಾರೆ' ಎಂದು ಹೇಳುತ್ತಾರೆ.

'ಎಂಬ್ರಿಯೊ ಡೊನೇಷನ್ ಟ್ರೀಟ್‌ಮೆಂಟ್‌ನಲ್ಲಿ ಯಶಸ್ಸಿನ ಪ್ರಮಾಣ ಶೇ.60ರಷ್ಟು ಇದ್ದು ಉಳಿದ ಶೇ.40ರಷ್ಟು ಪ್ರಕರಣಗಳು ವಿಫಲವಾಗುವ ಸಾಧ್ಯತೆಯೂ ಇದೆ. ದಾನಿಗಳಿಂದ ಪಡೆದ ಅಂಡಾಣು, ವೀರ್ಯಾಣುಗಳನ್ನು ತಂತ್ರಜ್ಞಾನದ ಮೂಲಕ ಅಭಿವೃದ್ಧಿಪಡಿಸಿದ್ದನ್ನು ಅಪೇಕ್ಷಿತ ಹೆಣ್ಣಿನ ಮಡಿಲ್ಲಲ್ಲಿಟ್ಟು ಗರ್ಭ ಧರಿಸುವಂತೆ ಮಾಡುವ ಪ್ರಕ್ರಿಯೆ ಇದು. ಎಂಬ್ರಿಯೊ ಅನ್ನು ಕೆಲವೊಂದು ಏಜೆನ್ಸಿಗಳು ಐವಿಎಫ್ ಕೇಂದ್ರಗಳಿಗೆ ಒದಗಿಸುತ್ತಾರೆ. ಇವೆಲ್ಲವೂ ಎಆರ್‌ಟಿ (ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಗೈಡ್‌ಲೈನ್ಸ್ ಆಫ್ ಇಂಡಿಯಾ) ದ ಸಲಹೆ ಸೂಚನೆಯಂತೇ ನಡೆಯುತ್ತದೆ' ಎನ್ನುತ್ತಾರೆ ಅವರು.

'ಜೀವನಶೈಲಿ ಕಾಯಿಲೆಗಳಾದ ಮಧುಮೇಹ, ರಕ್ತದೊತ್ತಡ, ಬೊಜ್ಜು, ಅತಿತೂಕ, ಹೈಪರ್‌ಟೆನ್ಶನ್ ಇರುವಂಥವರಿಗೆ ಇದು ಸೂಕ್ತವಾದುದಲ್ಲ, ನಾವು ಇದನ್ನು ಪ್ರೋತ್ಸಾಹಿಸುವುದೂ ಇಲ್ಲ' ಎಂದೂ ಹೇಳುತ್ತಾರೆ ಅವರು.

ಮಾಹಿತಿಗೆ: 080–43245536/56